ಸೇವಕಿ). ಬಹಳ ವರ್ಷಗಳಾದ ಮೇಲೆ ಸೋದರಿ ಲಲಿತಾ ನೆನಪಿಸಿಕೊಳ್ಳುತ್ತಿದ್ದರು, "ನಾನು ಸ್ವಾಮೀಜಿಯವರೊಂದಿಗೆ ಇದ್ದಾಗ, ಅವರೊಂದಿಗೆ ಕುಳಿತು ಮಾತನಾಡಲಿಲ್ಲವಲ್ಲ ಎಂದು ಯೋಚಿಸುತ್ತೇನೆ." ಆ್ಯಲಿಸ್ ಹ್ಯಾನ್ಸ್‌ಬ್ರೋ ಹೇಳುತ್ತಾರೆ, "ತಾವು ನಮಗಿಂತ ಶ್ರೇಷ್ಠರಾದವರು ಎಂಬ ಭಾವನೆಯನ್ನು ಸ್ವಾಮೀಜಿ ನಮ್ಮ ಮನಸ್ಸಿನಿಂದ ತೆಗೆದುಹಾಕಿದ್ದರು." ಮಧ್ಯಾಹ್ನದ ಹೊತ್ತಿನಲ್ಲಿ ಸ್ವಾಮೀಜಿ ಕೆಲವೊಮ್ಮೆ ಪತ್ರಗಳನ್ನು, ಕಥೆಗಳನ್ನು ಹಾಗೂ Who Knows How Mother Plays ಮುಂತಾದ ಕವನಗಳನ್ನೂ ಬರೆಯುತ್ತಿದ್ದರು. ಅಪರೂಪಕ್ಕೆ ಅವರು ವೈಯಕ್ತಿಕ ಸಂದರ್ಶನ ಗಳನ್ನು ನೀಡುತ್ತಿದ್ದರು ಅಥವಾ ಕುಟುಂಬದ ಸದಸ್ಯರೊಂದಿಗೆ ಚಹಾಪಾನ ಮಾಡಲೆಂದು ಕುಳಿತುಕೊಳ್ಳುತ್ತಿದ್ದರು. ಕೆಲವೊಮ್ಮೆ ಮೌನವಾಗಿ ಇದ್ದುಬಿಡುತ್ತಿದ್ದರು. ಒಂದು ಸಲ ಈ ರೀತಿ ಆದಾಗ, ಅವರನ್ನು ಭೇಟಿಯಾಗಲೆಂದು ಬಂದ ಒಬ್ಬ ವ್ಯಕ್ತಿ, ಸೋದರಿಯರ ಕಡೆಗೆ ತಿರುಗಿ, "ಇವರು ಇಂಗ್ಲಿಷ್ ಮಾತನಾಡುತ್ತಾರೆಯೆ?" ಎಂದು ಕೇಳಿದನು.

ರಾತ್ರಿಯ ಹೊತ್ತು, ಸ್ವಾಮೀಜಿ ಶ್ರೀಮತಿ ವೈಕಾಫ್‌ಗೆ ಅಡುಗೆಗೆ ಸಹಾಯ ಮಾಡಲು ಸಿದ್ಧರಾಗುತ್ತಿದ್ದರು. ಕೆಲವೊಮ್ಮೆ ಅವರು ಸ್ವತಃ ತಾವೇ ಅಡುಗೆ ಮನೆಯ ನೆಲದ ಮೇಲೆ ಕಾಲು ಮಡಿಚಿ ಕುಳಿತು, ಕೈಯಾರೆ ಮಸಾಲೆಯನ್ನು ರುಬ್ಬಿ, ಖಾರದ ಸಾರನ್ನು ತಯಾರಿಸುತ್ತಿದ್ದರು. ಬಳಿಕ ಸ್ವಾಮೀಜಿ ಆ ಮಸಾಲೆಯನ್ನು ಅದೆಷ್ಟು ಬಿಸಿ ಬೆಣ್ಣೆಯಲ್ಲಿ ಹುರಿಯುತ್ತಿದ್ದರೆಂದರೆ, ಅವರ ಕಣ್ಣು ಗಳೆಲ್ಲ ಹೊಗೆಯಿಂದ ಉರಿಯುತ್ತಿದ್ದವು. ಕೆಲವೊಮ್ಮೆ ಸ್ವಾಮೀಜಿ ತುಂಬ ಸಂತೋಷವಾಗಿರುತ್ತಿದ್ದರು. ಆಗ ಅವರು, "ತಾತ ಬರುತ್ತಿದ್ದಾನೆ. ಮಹಿಳೆಯರು ಕೋಣೆಯನ್ನು ಬಿಟ್ಟುಕೊಡಬೇಕು" ಎಂದು ಕೂಗಿ ಹೇಳುತ್ತಿದ್ದರು. ಇಂತಹ ಆಯ್ದ ಘಟನೆಗಳು ಸೋದರಿಯರ ಸ್ಮೃತಿಯಲ್ಲಿ ಸದಾ ದಾಖಲಾಗಿರುವ ಅಪೂರ್ವ ಚಿತ್ರಣಗಳು. ದಕ್ಷಿಣ ಪಸಾಡೆನದಲ್ಲಿನ ಸ್ವಾಮೀಜಿಯವರ ಈ ಲೀಲೆಗಳು ಸೋದರಿಯರ ಅಂತರಂಗದ ಜೀವನವೇ ಆಗಿತ್ತು ಎನ್ನಬಹುದು.

ಸ್ವಾಮೀಜಿ ಒಂದು ಸಲ ಸೋದರಿಯನ್ನು, ತಮ್ಮ ಯಾವುದೋ ಒಂದು ಮಸಾಲೆ ಅಡುಗೆಯನ್ನು ಆಕೆ ಇಷ್ಟಪಡು ತ್ತಾಳೆಯೇ ಎಂದು ಕೇಳಿದರು. ಆಕೆ ಹೌದೆಂದು ಉತ್ತರಿಸಿದರು. ಆದರೆ, ಸ್ವಾಮೀಜಿ ಹಾಗೆ ಮೋಸ ಹೋಗುವವರಲ್ಲ. "ನೀನು ಹೀಗೆ ಹೇಳುತ್ತಿರುವುದು, ನಿಜವಾಗಿಯೋ ಅಥವಾ ಕೇವಲ ಸೌಜನ್ಯಕ್ಕಾಗಿಯೊ?" ಎಂದು ಕೇಳಿಯೇಬಿಟ್ಟರು. "ನನಗನಿಸುತ್ತದೆ, ಅದು ಕೇವಲ ಸೌಜನ್ಯಕ್ಕಾಗಿ" ಎಂದು ಮನಸ್ಸಿಲ್ಲದ ಉತ್ತರ ಸೋದರಿಯಿಂದ ಬಂದಿತು. ಈ ಬಗೆಯ ಸರಳ ಮಾರ್ಗಗಳಿಂದ ಸ್ವಾಮೀಜಿ, ತಾವು ಯಾರ ಜೀವನಗಳನ್ನು ಪ್ರವೇಶಿಸಿದರೋ, ಅಂತಹವರೆಲ್ಲರ ಬದುಕನ್ನೂ ಪರಿವರ್ತಿಸಿದರು ಎಂದೇ ಹೇಳ ಬೇಕು.

ರಾತ್ರಿ ಊಟವಾದ ಮೇಲೆ ಮೇಜನ್ನು ಸ್ವಚ್ಛ ಮಾಡಿ, ಅಗ್ನಿಷ್ಟಿಕೆಯ ಬೆಂಕಿಯನ್ನು ಹೊತ್ತಿಸಲಾಗುತ್ತಿತ್ತು. ಸ್ವಾಮೀಜಿ ಕುಟುಂಬದವರೊಂದಿಗೆ ಅಲ್ಲಿ ಸೇರುತ್ತಿದ್ದರು. ಆಗ ಅವರು ತತ್ತ್ವಶಾಸ್ತ್ರ, ಧಾರ್ಮಿಕ ಇತಿಹಾಸ, ವಿಜ್ಞಾನ, ರಾಜಕೀಯ ಮುಂತಾದ ವಿವಿಧ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಅಥವಾ ಬೇರೆ ಬೇರೆ ಪುಸ್ತಕಗಳಿಂದ ಗಟ್ಟಿಯಾಗಿ ಓದಿ ಹೇಳುತ್ತಿದ್ದರು. ಒಮ್ಮೆ ಅದ್ವೈತ ವೇದಾಂತದ ಚರ್ಚೆಯೊಂದಕ್ಕೆ ಮುಕ್ತಾಯ ಹೇಳಲು ತಮ್ಮ ಸಂನ್ಯಾಸಿಗೀತೆಯಿಂದ ಓದಿ ಹೇಳಿದರು. ಇನ್ನೊಂದು ಸಲ ಹೆಲೆನ್ ಮೀಡ್, ಕೊಠಡಿಗೆ ಹೋಗಲು ಕ್ಯಾಂಡಲ್ ಅನ್ನು ಕೊಡುವವರೆಗೆ, ತಮ್ಮ 'ಗುರುವಿನ ಆವಶ್ಯಕತೆ' ಎಂಬ ಉಪನ್ಯಾಸದಿಂದ ಓದಿ ಹೇಳಿದರು. "ಇದರ ಅರ್ಥ ನಾನು ಮಲಗಲು ಹೋಗಬೇಕೆಂದೇನು?" ಎಂದು ಕೇಳಿದರು ಸ್ವಾಮೀಜಿ. "ಹೌದು. ಈಗ ೧೧ ಗಂಟೆ" ಎಂದು ಹೆಲೆನ್ ಉತ್ತರಿಸಿದಳು. ಸೋದರಿಯರು ಇದನ್ನು ಬಹುಕಾಲ ನೆನಪಿನಲ್ಲಿ ಇಟ್ಟುಕೊಂಡಿದ್ದರು. ಸ್ವಾಮೀಜಿಯವರ ಶಿಷ್ಯತ್ವದ ಕರೆಯನ್ನು ಅವರು ಹೇಗೆ ತಾನೆ ನಿರಾಕರಿಸಬಲ್ಲರು? ಆದರೆ, ಸ್ವಾಮೀಜಿಯವರ ವಿಷಯದಲ್ಲಿ ಮಂತ್ರದೀಕ್ಷೆಯು ಅವಶ್ಯಕವಾದ ಸಂಪ್ರದಾಯವಾಗಿರಲಿಲ್ಲ. "ನೀವು ಮೂವರನ್ನೂ ನಾನು ಮುಂಚೆಯಿಂದಲೂ ಬಲ್ಲೆ" ಎಂದು ಸ್ವಾಮೀಜಿ ಒಂದು ಸಲ ಅವರಿಗೆ ಹೇಳಿದರು. ೧೯೦೦ರ ಬೇಸಿಗೆಯಲ್ಲಿ ಶ್ರೀಮತಿ ಹ್ಯಾನ್ಸ್‌ಬ್ರೋಗೆ ಸ್ವಾಮೀಜಿ ಹೀಗೆ ಬರೆಯುತ್ತಾರೆ: "ನೀವು ಮೂವರು ಸೋದರಿಯರು ಎಂದೆಂದಿಗೂ ನನ್ನ ಮನಸ್ಸಿನ ಭಾಗವಾಗಿದ್ದೀರಿ." ಗುರು ತನ್ನ ಶಿಷ್ಯರಿಗೆ ಇದಕ್ಕಿಂತ ಹೆಚ್ಚಿಗೆ ಏನನ್ನು ತಾನೇ ಹೇಳಬಹುದು? (ಮುಂದುವರಿಯುವುದು)

## ಸಂನ್ಯಾಸಿ

ತನ್ನ ಮುಕ್ತಿಯ ತಾನು ಗಳಿಸಿದರೆ ಆಯ್ತೆ
ಲೋಕ ತಬ್ಬಲಿಯಿರಲು ಶಾಂತಿಯೇ ಅವಗೆ?
ಹಸಿವಳಲು ಲೋಕವನು ಸುಡಲಿ ನನಗೇನು
ವೀತರಾಗನು ಸಾವು ನಾಶಕೆ ಮನ ತೆರಬೇಕೆ
ಎನುತಿದ್ದ ಕಾಲಕ್ಕೆ ನಿನ್ನ ನುಡಿ ಕೂಗಿ ಬಂತು,
ಕಾಲದಾಹ್ವಾನಕ್ಕೆ ಕರುಣ ಕರೆಯಾಗಿ.

ಭಾರತವ ಸುತ್ತಿದೆ ಅಲವಾಯಿಂದ ಅಲ್ಮೊರಾದವರೆಗೆ
ಕಂಡು ನಿಟ್ಟುಸಿರುಟ್ಟೆ; ನಲಿದೆಯಾದರು ನಿಂತ ಗುಣಕೆ
ಜನ, ಮನ, ವೇಷ, ಭೂಷ, ಅಡುಗೆ, ಕೊಡುಗೆ ಎಷ್ಟು ತೆರ.
ಅರಿಯದೆಯೆ ಅರಿತ ಕರ್ಮವೇದವ ತಿಳಿದ ತಿಳಿಯು.
ಅಳಕು ಪರದಾಸ್ಯ ಪೀಡಿಸಿರೆ ತಬ್ಬಲಿತನವ ಸಾರಿ
ಭಾರತಕೆ ಮರಳೀತಂದು ಇನ್ನೊಮ್ಮೆ ಗಂಡುತನವೆಂದೆ

ಜನಜನತೆ ನೂರಾಗೆ ಬಾಳ್ನೂರು ಹೋಳೆಂದು
ಘೋಷಿಸಿದೆ ಸಮ್ಮಿಳನದೇಕತೆಯ ಒಸಗೆ
ತವಿದೊಡಲು ತೇದೊಡಲು ತುಂಬಿ ಬಾಳರಳಿರಲು
ಲೋಕಕ್ಕೆ ಸೌಭಾಗ್ಯ ಸಿದ್ಧಿಸುವುದೆಂದೆ.
ಪಡೆಯೊಂದ ಕಟ್ಟಿ ನಿನ್ನ ವ್ರತವರಿವಂತೆ
ಮೀಸಲಾಗಿಸಿದೆ ಗುಡುಗು ಡಂಗುರವಾಗೆ ನಿನ್ನ ಕೂಗು.

ಸಂನ್ಯಾಸಿಗೆಲ್ಲಿಯದು ಲೋಕಬದುಕಿನ ಗೊಡವೆ
ಎನುತಿದ್ದ ಬಂಜೆನುಡಿ ಅಮರವಾಯಿತ್ತಂದು,
ಬ್ರಹ್ಮ ನಕ್ಕಿತು, ನಲವು ಹಣ್ಣಾಯಿತು.

– ವಿ. ಸೀತಾರಾಮಯ್ಯ



# ನಿಜಗುಣರ ಕೈವಲ್ಯಪದ್ಧತಿ - ಒಂದು ಸ್ಥೂಲ ಪರಿಚಯ

ಪಾರ್ವತಮ್ಮ ಚಂದ್ರಣ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮುಂದೆ 'ನೀತಿಕ್ರಿಯಾಚರ್ಯ ಸ್ಥಲ'ದಲ್ಲಿ ಶಿಷ್ಯನ ಸಾಧನೆ ಬಲಗೊಂಡು ಬೆಳೆಯುತ್ತದೆ. ಸಾಧಕ ಜೀವಿ ನೈತಿಕ ನೆಲೆಗಟ್ಟಿನ ಮೇಲೆ ನಿಂತಾಗ ಆತನ ಪೂಜೆ, ನಿಷ್ಠೆ, ವೈರಾಗ್ಯ ಭಾವಗಳು ಬಲಿಯತೊಡಗುತ್ತವೆ, ಜೀವನದಲ್ಲಿ ಶ್ರದ್ಧೆ, ನಿಷ್ಠೆ ಹೆಚ್ಚುತ್ತವೆ. ಲೌಕಿಕ ಬಾಳುವೆ ತ್ಯಾಜ್ಯ ಅಥವಾ ಹೇಯ ಎಂಬ ಭಾವನೆಯು ಹೊರತಾಗಿ, ಅದನ್ನೇ ದೈವೀಕರಿಸಿಕೊಂಡು ಸಾಧಕ ಶಿವಭಾವದಿಂದ ಬಾಳುತ್ತಾನೆ. ಕಮಲದ ಪತ್ರದಂತೆ, ಸಂಸಾರದ ನಡುವೆ ಇದ್ದೂ ಇಲ್ಲದಂತೆ ಇರುತ್ತಾನೆ. ವೈರಾಗ್ಯಜೀವನವೆಂದರೆ ಹೇಡಿಯಂತೆ ಸಂಸಾರದ ಘೋರತೆಗೆ ಹೆದರಿ ಎಲ್ಲೋ ಹೇಗೋ ಇದ್ದು ಕಾಲ ಹಾಕುವುದಲ್ಲ. ನೋವು ನಲಿವು ಸಂಕಟ ತುಂಬಿದ ಪ್ರಪಂಚದೊಳಗೇ ಇದ್ದುಕೊಂಡೂ ಅದಕ್ಕಂಟಿಕೊಳ್ಳದೆ ನಿರ್ಲಿಪ್ತನಾಗಿರಬೇಕು ಎಂಬುದೇ ನಿಜಗುಣರ ಸಂದೇಶ. ಯಾವುದಕ್ಕೂ ಅಂಜದೆ ಅಳುಕದೆ ಧೀರನಾಗಿ ಬಾಳಿ 'ನಿಜ'ವನ್ನು ಸಾಧಿಸುವ ಗುರಿಯೇ ನೀತಿಕ್ರಿಯಾಚರ್ಯ ಸ್ಥಲದ ನೆಲೆಗಟ್ಟು.

**ಜಾಣನು ಲೌಕಿಕ ಪರಮಾರ್ಥವೆರಡನು**
**ಮಾಣದೆ ಕೂಡಿ ನಡೆಸುತಿಹನಿಂತು ||ಪ||**

ಎನ್ನುವ ಹಾಡಿನಲ್ಲಿ ಇಹಪರಗಳ ಸಮನ್ವಯವನ್ನು ಸಾಧಿಸುವ ಸುಲಭಮಾರ್ಗವನ್ನು ನಿಜಗುಣರು ಅರುಹಿದ್ದಾರೆ. ತಾಯಿಯ ಹಾಲು ಕುಡಿಯುವ ಕೂಸು ಒಂದು ಕಡೆ ಹಾಲುಣ್ಣುತ್ತಿದ್ದಂತೆ, ತಾಯಿಯ ಎದೆಯ ಇನ್ನೊಂದು ಭಾಗದ ಮೇಲೆ ಕೈಯಿರಿಸಿರುವಂತೆ, ಸಾಧಕನಾದವನು ಕೂಡ ಲೌಕಿಕದ ನಡುವೆ ಇದ್ದು ಪರಮಾರ್ಥವನ್ನು ಸಾಧಿಸುವ ಚಿಂತನೆ ಮಾಡುತ್ತ ಇರಬೇಕು. 'ಇಲ್ಲಿ' ಬಾಳುತ್ತಿದ್ದರೂ 'ಅಲ್ಲಿ'ಯ ಧ್ಯಾನದಲ್ಲಿ ಇದ್ದರೆ, ಈ ಜಗತ್ತಿನ ಕಷ್ಟಸುಖಗಳಿಗೆ ಅಂಟಿಕೊಳ್ಳದಂತೆ ನಿರ್ಲಿಪ್ತನಾಗಿರಲು ಸಾಧ್ಯವಿದೆ ಎಂಬುದು ಈ ಹಾಡಿನಲ್ಲಿ ಸ್ಪಷ್ಟವಾಗುತ್ತದೆ. ಶ್ರೀರಾಮಕೃಷ್ಣ ಪರಮಹಂಸರ ಮಾತಿನಂತೆ, 'ಶ್ರೀಮಂತರ ಮನೆಯ ದಾಸಿ'ಯೋಪಾದಿ ಲೌಕಿಕದಲ್ಲಿ ನಾವು ಬಾಳಬೇಕು. ಅದನ್ನೇ ನಿಜಗುಣರು ಇಲ್ಲಿ ಬಹಳ ಸಮರ್ಥವಾಗಿ ಪಡಿಮೂಡಿಸಿದ್ದಾರೆ. ಆದರೆ ಇಂತಹ ಸ್ಥಿತಿಯನ್ನು ಸಾಧಿಸುವುದು ಎಲ್ಲರಿಗೂ ಸುಲಭಸಾಧ್ಯವಾದ ಮಾತಲ್ಲ. ಅಂತಹವರು ಜೀವನದಲ್ಲಿ ಶ್ರದ್ಧೆ, ನಿಷ್ಠೆಗಳನ್ನು ಬೆಳೆಸಿಕೊಳ್ಳಬೇಕು. ಬಾಳಿನ ಹೆಜ್ಜೆ ಹೆಜ್ಜೆಯಲ್ಲಿಯೂ ಕೆಲವು ನೀತಿಸೂತ್ರಗಳನ್ನು ಅನುಸರಿಸಿ, ಆ ಮೂಲಕ ಅಂಥ ನಿಲುವನ್ನು ಸಾಧಿಸಿಕೊಳ್ಳಬೇಕು. ಅಂತಹ ನೀತಿಸೂತ್ರದ ಮಾತುಗಳನ್ನು ಈ ಸ್ಥಲದ ಮೊದಲಿನ ಗೀತೆಯಲ್ಲಿ ಕಾಣಬಹುದು.

**ಶ್ರೀಗುರು ವಚನದಿಂದಧಿಕ ಸುಧೆಯುಂಟೆ ?**
**ರಾಗದಿಂ ಬೇರಿನ್ನು ಭವಬೀಜಮುಂಟೆ?**
**ನರಜನ್ಮದಿಂದಿಹದೊಳು ಮಿಗಿಲುಂಟೆ?**
**ಕರಣವಿಜಯದಿಂದ ಕಲಿತನಮೊಂದುಂಟೆ?**
**ಧರೆಗೆ ಯಾಚನೆಯಿಂದ ಲಘುತರಮುಂಟೆ?**
**ಪರಬೊಮ್ಮದರಿವಿನಿಂದುರೆ ಜಾಣ್ಮೆಯುಂಟೆ?**